ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

DTE-ADMI0ACM2/08/2024

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:11-02-2025.

**-:: ಸು ತ್ತೋ ಲೆ ::-**

**ವಿಷಯ:** 2024-25ನೇ ಸಾಲಿನ ಅರೆಕಾಲಿಕ (ಪಾರ್ಟ್-ಟೈಮ್) 03 ಮತ್ತು 05ನೇ ಸೆಮಿಸ್ಟರ್ ತರಗತಿಗಳಿಗೆ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರವೇಶ ಪಡೆಯಲು ಅಂತಿಮ ದಿನಾಂಕ ನಿಗಧಿಪಡಿಸುವ ಕುರಿತು.

**ಉಲ್ಲೇಖ:** ಈ ಕಛೇರಿ ಸುತ್ತೋಲೆ ಸಂ. DTE-ADMI0ACM2/45/2024, Date:19.10.2024 (ಶೈಕ್ಷಣಿಕ ವೇಳಾಪಟ್ಟಿ)

**********

2024-25ನೇ ಸಾಲಿನಲ್ಲಿ ಅರೆಕಾಲಿಕ (ಪಾರ್ಟ್-ಟೈಮ್) 03 ಮತ್ತು 05ನೇ ಸೆಮಿಸ್ಟರ್ ತರಗತಿಗಳಿಗೆ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರವೇಶ ಪಡೆಯುವ ಸಂಬಂಧ ನಿಯಮಗಳ ಪ್ರಕಾರ ಅರ್ಹ ಅಭ್ಯರ್ಥಿಗಳಿಗೆ ಪ್ರವೇಶ ನೀಡಲು ಕೆಳಕಂಡಂತೆ ಅಂತಿಮ ದಿನಾಂಕ ನಿಗಧಿಪಡಿಸಲಾಗಿದೆ.

1. **ದಿನಾಂಕ:17-02-2025**ರವರೆಗೆ ಯಾವುದೇ ದಂಡ ಶುಲ್ಕವಿಲ್ಲದೆ ಅರ್ಹ ಶುಲ್ಕವನ್ನು ಮಾತ್ರ ಪಡೆದು ಪ್ರವೇಶ ನೀಡುವುದು.
2. **ದಿನಾಂಕ:22-02-2025**ರವರೆಗೆ ರೂ. 200/-ರ ದಂಡ ಶುಲ್ಕದೊಂದಿಗೆ ಅರ್ಹ ಶುಲ್ಕವನ್ನು ಪಾವತಿಸಿಕೊಂಡು ಪ್ರವೇಶ ನೀಡುವುದು.
3. **ದಿನಾಂಕ:01-03-2025**ರವರೆಗೆ ರೂ. 400/-ರ ದಂಡ ಶುಲ್ಕದೊಂದಿಗೆ ಅರ್ಹ ಶುಲ್ಕವನ್ನು ಪಾವತಿಸಿಕೊಂಡು ಪ್ರವೇಶ ನೀಡುವುದು.
4. ಅಂತಿಮವಾಗಿ **ದಿ:08-03-2025**ರವರೆಗೆ ರೂ. 1000/-ರ ದಂಡ ಶುಲ್ಕದೊಂದಿಗೆ ಅರ್ಹ ಶುಲ್ಕವನ್ನು ಪಾವತಿಸಿಕೊಂಡು ಪ್ರವೇಶ ನೀಡುವುದು.

**ಮರುಪ್ರವೇಶ :-** ಅರೆಕಾಲಿಕ (ಪಾರ್ಟ್-ಟೈಮ್) 03 ಮತ್ತು 05ನೇ ಸೆಮಿಸ್ಟರ್ ತರಗತಿಗಳಿಗೆ ನಿಯಮಗಳ ಪ್ರಕಾರ ಅರ್ಹ ಅಭ್ಯರ್ಥಿಗಳಿಗೆ ದಂಡ ಶುಲ್ಕವಿಲ್ಲದೆ ಅರ್ಹ ಶುಲ್ಕವನ್ನು ಪಡೆದು ಮರುಪ್ರವೇಶ ನೀಡುವಲ್ಲಿ ಅಂತಿಮ ದಿ:17-02-2025 ನಂತರ ತಡವಾಗಿ ಮರುಪ್ರವೇಶ ಕೋರಿ ಬಂದತಂಹ ಅಭ್ಯರ್ಥಿಗಳಿಗೆ ಮೇಲ್ಕಂಡಂತೆ ದಂಡ ಶುಲ್ಕದೊಂದಿಗೆ ಅರ್ಹ ಶುಲ್ಕ ವನ್ನು ಪಾವತಿಸಿಕೊಂಡು ಪ್ರವೇಶ ನೀಡುವುದು.

ಅರೆಕಾಲಿಕ (ಪಾರ್ಟ್-ಟೈಮ್) 03 ಮತ್ತು 05ನೇ ಸೆಮಿಸ್ಟರ್ ತರಗತಿಗಳಿಗೆ ನಿಯಮಗಳ ಪ್ರಕಾರ ಅರ್ಹ ಅಭ್ಯರ್ಥಿಗಳಿಗೆ ಪ್ರವೇಶ ನೀಡಲು ಈ ಕೆಳಂಡ ಅಂಶಗಳನ್ನು ಪರಿಗಣಿಸಿ ಪ್ರವೇಶ ನೀಡತಕ್ಕದ್ದು.

- ಹಿಂದಿನ ಸೆಮಿಸ್ಟರ್ ನಲ್ಲಿ ಹಾಜರಾತಿ ಕಡಿಮೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳು ಪ್ರವೇಶಕ್ಕೆ ಅರ್ಹರಿರುವುದಿಲ್ಲ.
- ಪರೀಕ್ಷಾ ದುರಾಚಾರ (Suspected Malpractice) ಎಸಗಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಅನುಮತಿ ಪಡೆಯದೇ ಪ್ರವೇಶ ನೀಡತಕ್ಕದ್ದಲ್ಲ.
- ಪ್ರವೇಶಾನುಮೋದನೆಯಾಗದೇ ತಡೆಹಿಡಿದಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಪ್ರವೇಶಕ್ಕೆ ಅರ್ಹರಿರುವುದಿಲ್ಲ.

- ಅರೆಕಾಲಿಕ (ಪಾರ್ಟ್-ಟೈಮ್) 03 ಮತ್ತು 05ನೇ ಸೆಮಿಸ್ಟರ್‌ಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ನಿಯಮಗಳ ಪ್ರಕಾರ ಅರ್ಹತೆ ಹೊಂದಿರುವುದನ್ನು ಖಚಿತಪಡಿಸಿಕೊಂಡು ಪ್ರವೇಶ ನೀಡತಕ್ಕದ್ದು. 01 ರಿಂದ 04ನೇ ಸೆಮಿಸ್ಟರ್ ಪರೀಕ್ಷೆಗಳಲ್ಲಿ 04 ವಿಷಯಗಳಿಗಿಂತ ಹೆಚ್ಚಿನ ವಿಷಯಗಳಲ್ಲಿ ಅನುತ್ತೀರ್ಣಗೊಂಡಿದಲ್ಲಿ, ಅಂತಹ ವಿದ್ಯಾರ್ಥಿಗಳು 03 & 05ನೇ ಸೆಮಿಸ್ಟರ್ ಪ್ರವೇಶ ಪಡೆಯಲು ಅರ್ಹರಿರುವುದಿಲ್ಲ.

ಮೇಲ್ಕಂಡ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಪ್ರಾಂಶುಪಾಲರುಗಳು ನಿಯಮಗಳ ಪ್ರಕಾರ ಪ್ರವೇಶ ಪಡೆಯಲು ಅರ್ಹರಿರುವ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವುದು ನಿಯಮಗಳನ್ನು ಮೀರಿ ಪ್ರವೇಶಗಳನ್ನು ನೀಡಿದಲ್ಲಿ ಅಂತಹ ಪ್ರಕರಣಗಳಿಗೆ ಪ್ರಾಂಶುಪಾಲರುಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ಪ್ರವೇಶ ಕೋರಿ ತಡವಾಗಿ ಸಲ್ಲಿಸುವ ಮನವಿಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಸಾಕಷ್ಟು ತಿಳುವಳಿಕೆ ನೀಡುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳುವುದು. ಈ ನಿಟ್ಟಿನಲ್ಲಿ ಯಾವುದೇ ಮನವಿಗಳನ್ನು ಆಯುಕ್ತಾಲಯಕ್ಕೆ ಕಳುಹಿಸದೆ ನಿಯಮಗಳ ಪ್ರಕಾರ ಪ್ರಿನ್ಸಿಪಾಲರ ಹಂತದಲ್ಲೇ ಇತ್ಯರ್ಥಗೊಳಿಸಬೇಕೆಂದು ತಿಳಿಸಲಾಗಿದೆ. ತರಗತಿಗಳನ್ನು ನಿಗಧಿತ ಅವಧಿಯಲ್ಲಿ ಪ್ರಾರಂಭಿಸಿ, ಪಠ್ಯಕ್ರಮಕ್ಕೆ ವಿಶೇಷ ತರಗತಿಗಳನ್ನು ತೆಗೆದುಕೊಂಡು ಶೈಕ್ಷಣಿಕ ವೇಳಾಪಟ್ಟಿಯ ಪ್ರಕಾರ ಮುಕ್ತಾಯಗೊಳಿಸುವುದು.

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

ಇವರಿಗೆ,

1. ಪ್ರಿನ್ಸಿಪಾಲರು, ಸರ್ಕಾರಿ ಎಸ್.ಜೆ ಪಾಲಿಟೆಕ್ನಿಕ್, ಬೆಂಗಳೂರು.
2. ಪ್ರಿನ್ಸಿಪಾಲರು, ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು.
3. ಪ್ರಿನ್ಸಿಪಾಲರು, ಎಂ.ಇ.ಐ ಪಾಲಿಟೆಕ್ನಿಕ್, ಬೆಂಗಳೂರು.
4. ಪ್ರಿನ್ಸಿಪಾಲರು, ದಿ ಆಕ್ಸ್‌ಫರ್ಡ್ ಪಾಲಿಟೆಕ್ನಿಕ್, ಬೆಂಗಳೂರು.
5. ಪ್ರಿನ್ಸಿಪಾಲರು, ನಾಡ್ಗೀರ್ ಪಾಲಿಟೆಕ್ನಿಕ್, ಬೆಂಗಳೂರು

ಸೂಕ್ತ ಮಾಹಿತಿಗಾಗಿ ಹಾಗೂ ಅನುಸರಣೆಗಾಗಿ

**ಪ್ರತಿ ಇವರಿಗೆ ಮಾಹಿತಿಗಾಗಿ:**

1. ಆಯುಕ್ತರ ಆಪ್ತಶಾಖೆಗೆ.
2. ನಿರ್ದೇಶಕರ ಆಪ್ತಶಾಖೆಗೆ.
3. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಜಂಟಿ ನಿರ್ದೇಶಕರು(ಪರೀಕ್ಷೆ), ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
5. 6. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ಇ-ಆಡಳಿತ ವಿಭಾಗಕ್ಕೆ - ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್ಸೈಟ್ನಲ್ಲಿ ಪ್ರಚುರಪಡಿಸುವುದು.
7. ರಿಜಿಸ್ಟ್ರಾರ್(ಪರೀಕ್ಷೆ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
8. ಆರ್.ಡಿ.ಎಂ ವಿಭಾಗಗಳಿಗೆ.
9. ಇಆರ್‌ಎಸ್(3) ವಿಭಾಗಕ್ಕೆ
10. ಕಛೇರಿ ಪ್ರತಿ